## ೨೦೧೫ರ ಮಾರ್ಚ್ ೧೮ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) ೨೫ನೇ ಸಭೆಯ ನಡಾವಳಿಗಳು:

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 25ನೇ ಪ್ರಶಾಸನ ಸಭೆಯು ಮಾನ್ಯ ಪ್ರಭಾರಿ ಕುಲಪತಿಗಳ ಆದೇಶದಂತೆ ದಿನಾಂಕ: 18.03.2015ರಂದು ಮಧ್ಯಾಹ್ನ 3.00ಕ್ಕೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | |
|---|---|
| ೧. **ಪ್ರೊ. ಶ್ರೀನಿವಾಸ ವರಖೇಡಿ,** ಮಾನ್ಯ ಕುಲಪತಿಗಳು (ಪ್ರ) | ಅಧ್ಯಕ್ಷರು |
| ೨. **ಶ್ರೀ ಕೆ ಭೀಮಪ್ಪ** | ಸದಸ್ಯರು, |
| ೩. **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ** | ಸದಸ್ಯರು, |
| ೪. **ಶ್ರೀಮತಿ ಜಯಶ್ರೀ. ವಿ. ಕೊರತಿ** | ಸದಸ್ಯರು, |
| ೫. **ಡಾ. ಸಿದ್ಧಮಲ್ಲ ಸ್ವಾಮಿ** | ಸದಸ್ಯರು, |
| ೬. ವಿದ್ವಾನ್. **ಶ್ರೀ ಗಜಾನನ ಲಕ್ಷ್ಮೀನಾರಾಯಣ ಭಟ್ಟ** | ಸದಸ್ಯರು, |
| ೭. **ಪ್ರೊ. ಕೆ.ಇ. ರಾಧಾಕೃಷ್ಣ,** | ಸದಸ್ಯರು, |
| ೮. **ಡಾ. ವನಿತಾ ರಾಮಸ್ವಾಮಿ,** | ಸದಸ್ಯರು, |
| ೯. **ಆಯುಕ್ತರು,** ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು–560001 | ಸದಸ್ಯರು |
| ೧೦. **ಡಾ. ಎಮ್. ಕೆ. ಶ್ರೀಧರ್,** ಕುಲಸಚಿವರು, | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | |
|---|---|
| 1. **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| 3. **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| 4. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| 5. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| 6. **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 7. **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| 8. **ಸರ್ಕಾರದ ಕಾರ್ಯದರ್ಶಿ,** ಕಂದಾಯ ಇಲಾಖೆ( ಧಾರ್ಮಿಕ ದತ್ತಿ ವಿಭಾಗ) | ಸದಸ್ಯರು |
| 9. **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ– ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| 10. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು, | ಸದಸ್ಯರು |
| 11. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು–560002 | ಸದಸ್ಯರು |
| 12. **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| 13. **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| 14. **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| 15. **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |
| 16. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ ಬೆಂಗಳೂರು | ಸದಸ್ಯರು |
| 17. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. | ಸದಸ್ಯರು |
| 18. **ಡಾ. ಮೈಕೆಲ್,** ಪ್ರಾಧ್ಯಾಪಕರು, ಗುಲ್ಬರ್ಗಾ ವಿಶ್ವವಿದ್ಯಾಲಯ | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಹಿಂದಿನ ಪ್ರಶಾಸನ ಸಮಿತಿಯ ನಡಾವಳಿಗಳನ್ನು ಅನುಮೋದಿಸುವ ಬಗ್ಗೆ.**

**ಟಿಪ್ಪಣಿ:** ಹಿಂದಿನ ಪ್ರಶಾಸನ ಸಮಿತಿಯ ಸಭೆಯಲ್ಲಿ ಚರ್ಚಿತವಾಗಿ ನಿರ್ಣಯಗೊಂಡು ಅನುಪಾಲನೆಯಾದ ಅಂಶಗಳನ್ನು ದೃಢೀಕರಿಸಲು ಸಭೆಯ ಅನುಮತಿಗಾಗಿ ಇಡಲಾಗಿತ್ತು.

ನಿರ್ಣಯ : **ಮಾನ್ಯ ಕುಲಪತಿಗಳು ಈ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯ ಕೊನೆಯಲ್ಲಿ ಪ್ರಸ್ತುತಪಡಿಸಲು ನಿರ್ದೇಶಿದರು. ಆದರೆ ಸಮಯಾಭಾವದಿಂದಾಗಿ ಅನುಪಾಲನೆಯಾದ ಅಂಶಗಳನ್ನು ಇಡಲು ಆಗಲಿಲ್ಲ. ಇದನ್ನು ಮುಂದಿನ ಪ್ರಶಾಸನ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಿತು.**

**ವಿಷಯ 2: ಕರ್ನಾಟಕ ರಾಜ್ಯ ಮಟ್ಟದಲ್ಲಿ ನಡೆದ ಶಾಸ್ತ್ರಸ್ಪರ್ಧೆಗಳ ಖರ್ಚುವೆಚ್ಚಗಳನ್ನು ಅನುಮೋದಿಸುವ ಬಗ್ಗೆ.**

**ಟಿಪ್ಪಣಿ:** ವಿಶ್ವವಿದ್ಯಾಲಯವು 2014–15ರ ಸಾಲಿನಲ್ಲಿ ರಾಜ್ಯಮಟ್ಟದ ಸಾಹಿತ್ಯ ಸ್ಪರ್ಧೆಗಳನ್ನು ಡಿಸೆಂಬರ್ 2014, ಜನವರಿ 2015ರಲ್ಲಿ ಆಯೋಜಿಸಿತ್ತು. ಕಾರ್ಯಕ್ರಮ ಸಂಯೋಜನೆ, ಭಾಗವಹಿಸುವ ಸ್ಪರ್ಧಿಗಳು ಮತ್ತು ಅಧ್ಯಾಪಕರಿಗೆ ಪ್ರಯಾಣ ವೆಚ್ಚ, ಊಟೋಪಚಾರ, ಬಹುಮಾನ ಧನ, ಪಾರಿತೋಷಕ, ಇತ್ಯಾದಿಗೆ ಸಂಬಂಧಿಸಿದಂತೆ 6 ಲಕ್ಷ ರೂಗಳನ್ನು ಮುಂಗಡವಾಗಿ ಪಡೆಯಲಾಗಿತ್ತು. ವಿದ್ವಾನ್ ಡಾ. ಮಂಜುನಾಥ ಭಟ್ಟ, ಹಾಗೂ ವಿದ್ವಾನ್ ಭಾಸ್ಕರ ಭಟ್ಟ ಜೋಷಿ, ಇವರು ಈ ಸ್ಪರ್ಧೆಗಳ ಸಂಚಾಲಕರಾಗಿದ್ದರು. ಇದರ ಒಟ್ಟು ಖರ್ಚು ವೆಚ್ಚಗಳನ್ನು ಸಭೆಯ ಅನುಮೋದನೆಗೆ ಮಂಡಿಸಿದೆ.

ನಿರ್ಣಯ : **ಸಭೆಯ ಸದಸ್ಯರು ಖರ್ಚು ವೆಚ್ಚಗಳನ್ನು ಅನುಮೋದಿಸಿದರು. ಮುಂದಿನ ವರ್ಷಗಳಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹಕರ ಬಹುಮಾನ ಧನವನ್ನು ನೀಡಬಹುದೆಂದು ಸೂಚಿಸಿದರು. ಶಲಾಕಾಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಕ್ರಮವಾಗಿ 10,8,6 ಸಹಸ್ರ ರೂಗಳ ಬಹುಮಾನವನ್ನು ನೀಡಬೇಕೆಂದು ಅಧ್ಯಕ್ಷರು ಸೂಚಿಸಿದರು. ಪ್ರತಿ ಸ್ಪರ್ಧೆಯಲ್ಲಿ ಪ್ರತಿ ಕಾಲೇಜಿನ 2 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಹುದೆಂದು ಸೂಚಿಸಿದರು.**

**ವಿಷಯ 3: ಅಗರ್ತಲಾದಲ್ಲಿ ನಡೆದ ರಾಷ್ಟ್ರಮಟ್ಟದ ಕ್ರೀಡಾ ಸ್ಪರ್ಧೆಗಳ ಖರ್ಚುವೆಚ್ಚಗಳನ್ನು ಅನುಮೋದಿಸುವ ಬಗ್ಗೆ.**

**ಟಿಪ್ಪಣಿ:** ತ್ರಿಪುರಾ ರಾಜ್ಯದ ರಾಜಧಾನಿ ಅಗರ್ತಲಾದಲ್ಲಿ ನಡೆದ ರಾಷ್ಟ್ರೀಯ ಸಂಸ್ಕೃತ ಕ್ರೀಡಾ ಸ್ಪರ್ಧೆಗಳಲ್ಲಿ ಕಸಂವಿಗೆ ಸಂಬಂಧಿಸಿದ ಘಟಕ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದು, ಆ ತಂಡದ ನೇತೃತ್ವವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಸಾರಾಂಗದ ಉಪನಿರ್ದೇಶಕರಾದ ಡಾ. ಸಂತೋಷ ಸು, ಹಾನಗಲ್ಲ ಅವರು ವಹಿಸಿದ್ದರು. ಕನಕಪುರದ ನಿರ್ವಾಣ ಸಂಸ್ಕೃತ ಕಾಲೇಜಿನ ಪ್ರಾಚಾರ್ಯರಾದ ವಿದ್ವಾನ್ ಮಲ್ಲನಗೌಡ ಪಾಟೀಲ್ ಅವರು ಮೇಲ್ವಿಚಾರಕರಾಗಿದ್ದರು. ಒಟ್ಟು 6 ಪದಕಗಳನ್ನು ನಮ್ಮ ವಿದ್ಯಾರ್ಥಿಗಳು ಪಡೆದಿದ್ದಾರೆ ಎಂದು ತಿಳಿಸಲು ಬಹಳ ಹರ್ಷವಾಗುತ್ತದೆ. ಇದರ ಒಟ್ಟು ಖರ್ಚು ವೆಚ್ಚಗಳನ್ನು ಸಭೆಯ ಅನುಮೋದನೆಗೆ ಮಂಡಿಸಲಾಗಿತ್ತು.

ನಿರ್ಣಯ : **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಈ ಸ್ಪರ್ಧೆಗೆ ಮುಂಗಡ ಪಡೆದಿದ್ದು ಸಂಪೂರ್ಣ ಹಣವನ್ನು ಕೇಂದ್ರ ಸರ್ಕಾರವು ಹಿಂತಿರುಗಿಸಿದ್ದರಿಂದ ಇದರ ಖರ್ಚು ವೆಚ್ಚದ ಬಾಬ್ತು ಇರುವುದಿಲ್ಲ. ಸಂಬಂಧಿಸಿದ ಕಾಲೇಜುಗಳ ವಿದ್ಯಾರ್ಥಿಗಳು ರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಪದಕಗಳನ್ನು ಗಳಿಸಿದ್ದರ ಬಗ್ಗೆ ಸಭೆಯು ಮೆಚ್ಚುಗೆ ವ್ಯಕ್ತಪಡಿಸಿ ಖರ್ಚು ವೆಚ್ಚಗಳನ್ನು ಅನುಮೋದಿಸಿತು.**

**ವಿಷಯ 4: ಅಂತಾರಾಷ್ಟ್ರೀಯ ಆಯುರ್ವೇದ–ಯೋಗ–ವೇದಾಂತ ಸಮ್ಮೇಳನಗಳ ಖರ್ಚುವೆಚ್ಚಗಳನ್ನು ಅನುಮೋದಿಸುವ ಬಗ್ಗೆ.**

**ಟಿಪ್ಪಣಿ:** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಜನವರಿ 10–11, 2015 ರಂದು ಯೋಗ ಪರಿಜ್ಞಾನ ಪ್ರತಿಷ್ಠಾನ ಮತ್ತು ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, ಇವುಗಳ ಸಹಯೋಗದೊಂದಿಗೆ ಎರಡು ದಿನಗಳ ಅಂತಾರಾಷ್ಟ್ರೀಯ ಆಯುರ್ವೇದ, ಯೋಗ, ಮತ್ತು ವೇದಾಂತ ಸಮ್ಮೇಳನವನ್ನು ಆಯೋಜಿಸಿತ್ತು. ಎರಡು ದಿನದ ಸಮ್ಮೇಳನದಲ್ಲಿ ಆಯುರ್ವೇದಕ್ಕೆ ಸಂಬಂಧಿಸಿದಂತೆ 140 ಪ್ರಬಂಧಗಳು, ಯೋಗದಲ್ಲಿ 70, ಹಾಗೂ ವೇದಾಂತದಲ್ಲಿ 70 ಪ್ರಬಂಧಗಳು ಮಂಡಿಸಲ್ಪಟ್ಟವು. ರಾಜ್ಯಾದ್ಯಂತ ಹಾಗೂ ದೇಶಾದ್ಯಂತ 1,000ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಇದಕ್ಕೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 1,00,000/– ರೂಪಾಯಿಗಳ ಅನುದಾನವನ್ನು ನೀಡಿತ್ತು. ಇದರ ಒಟ್ಟು ಖರ್ಚು ವೆಚ್ಚಗಳನ್ನು ಸಭೆಯ ಅನುಮೋದನೆಗೆ ಮಂಡಿಸಲಾಗಿತ್ತು.

ನಿರ್ಣಯ : **ಅಂತಾರಾಷ್ಟ್ರೀಯ ಸಮ್ಮೇಳನದ ಖರ್ಚು ವೆಚ್ಚಗಳನ್ನು ಸಭೆಯು ಅನುಮೋದಿಸಿ, ಈ ಅಂತಾರಾಷ್ಟ್ರೀಯ ಸಮ್ಮೇಳನದ ಯಶಸ್ಸಿಗೆ ಕಾರಣರಾದ ಕ.ಸಂ.ವಿಯ ಅಧಿಕಾರಿಗಳು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಪ್ರಶಂಸಿಸಿತು. ಈ ಕಾರ್ಯಕ್ರಮದ ಯಶಸ್ಸಿಗೆ ವಿಶೇಷವಾಗಿ ಶ್ರಮಿಸಿದ ಕುಲಸಚಿವರನ್ನು ಅಭಿನಂದಿಸಲಾಯಿತು.**

**ವಿಷಯ 5: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೂತನ ಕುಲಪತಿಗಳ ಆಯ್ಕೆ ಸಂಬಂಧ ನಡೆದ ಶೋಧನಾ ಸಮಿತಿಯ ಸಭೆಯ ಖರ್ಚುವೆಚ್ಚಗಳನ್ನು ಅನುಮೋದಿಸುವ ಬಗ್ಗೆ.**

ಟಿಪ್ಪಣಿ: ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನೂತನ ಕುಲಪತಿಗಳ ಆಯ್ಕೆ ಮಾಡುವ ಸಂಬಂಧ ಶೋಧ ಸಮಿತಿಯೊಂದನ್ನು ರಚಿಸಿತ್ತು. ಆ ಸಮಿತಿ ಸಭೆಗೆ ಬರುವ ಮಾನ್ಯ ಸದಸ್ಯರಿಗೆ ಮಾಹಿತಿ ನೀಡುವ, ಅವರು ಬಂದು ಹೋಗುವ ವಿಮಾನಯಾನ ಪ್ರಯಾಣ ವೆಚ್ಚ, ಸ್ಥಳೀಯ ವಸತಿ, ಸ್ಥಳೀಯ ವಾಹನ ಓಡಾಟ, ಸಭೆಯ ದಿನದಂದು ಊಟೋಪಚಾರಗಳು, ಸ್ಟೇಷನರಿ, ಹೂಗುಚ್ಛ, ತಿನಿಸುಗಳು, ಮುಂತಾದವೆಲ್ಲವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ವಹಿಸಿಕೊಳ್ಳಬೇಕೆಂದು ಉನ್ನತ ಶಿಕ್ಷಣ ಇಲಾಖೆಯು ನಿರ್ದೇಶಿಸಿತ್ತು. ಈ ಹಿನ್ನೆಲೆಯಲ್ಲಿ ಕುಲಸಚಿವರು ಮುಂಗಡ 1,50,000/- ರೂಗಳನ್ನು ಪಡೆದಿದ್ದು 1,15,910.00/- ರೂಗಳು ಖರ್ಚಾಗಿದ್ದು ಬಾಕಿ ಹಣವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದ್ದು ಖರ್ಚುವೆಚ್ಚದ ಪಟ್ಟಿಯನ್ನು ಸಭೆಯ ಅನುಮತಿಗಾಗಿ ಮಂಡಿಸಲಾಗಿತ್ತು.

ನಿರ್ಣಯ : **ನೂತನ ಕುಲಪತಿಗಳ ಆಯ್ಕೆ ಮಾಡುವ ಸಂಬಂಧ ಶೋಧ ಸಮಿತಿ ಖರ್ಚು ವೆಚ್ಚಗಳನ್ನು ಸಭೆಯು ಅನುಮೋದಿಸಿತು.**

**ವಿಷಯ 6: ವೇದವಿಜ್ಞಾನ ಗುರುಕುಲವು ವಿವೇಕಾನಂದ ಯೋಗ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಿದ ಅಂತಾರಾಷ್ಟ್ರೀಯ ಚರ್ಚಾಗೋಷ್ಠಿಗೆ ಸಂಬಂಧಿಸಿದಂತೆ ಖರ್ಚುವೆಚ್ಚಗಳನ್ನು ಅನುಮೋದಿಸುವ ಬಗ್ಗೆ.**

ಟಿಪ್ಪಣಿ: ವೇದವಿಜ್ಞಾನ ಗುರುಕುಲವು ವಿವೇಕಾನಂದ ಯೋಗ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಿದ, ಅಂತಾರಾಷ್ಟ್ರೀಯ ಚರ್ಚಾಗೋಷ್ಠಿಗೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯವು ನೀಡಿದ 75,000/- ರೂ.ಗಳ ಧನಸಹಾಯದ ಬಗೆಗೆ ಘಟನೋತ್ತರ ಅನುಮೋದನೆ ಕೋರಿತ್ತು.

ನಿರ್ಣಯ .: **ಅಂತಾರಾಷ್ಟ್ರೀಯ ಚರ್ಚಾಗೋಷ್ಠಿಗೆ ಸಂಬಂಧಿಸಿದಂತೆ ವೇದವಿಜ್ಞಾನ ಗುರುಕುಲವು ಇನ್ನೂ ಖರ್ಚು ವೆಚ್ಚಕ್ಕೆ ಸಂಬಂಧಿಸಿದಂತೆ ರಸೀದಿಗಳನ್ನು ನೀಡದೇ ಇರುವುದರಿಂದ ಮುಂದಿನ ಪ್ರಶಾಸನ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಿತು ಮತ್ತು ಘಟನೋತ್ತರ ಅನುಮೋದನೆ ನೀಡಲಾಯಿತು.**

**ವಿಷಯ 7: ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಮೇಲಂತಸ್ತಿನಲ್ಲಿ ಭೂಸೇನಾ ಇಲಾಖೆಯವರು ಕಟ್ಟಡ ನಿರ್ಮಿಸಿಕೊಡುವ ಬಗ್ಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಹಲವಾರು ತರಗತಿಗಳು ಈ ವರ್ಷ ಪ್ರಾರಂಭವಾಗಿ ಇನ್ನೂ ಹಲವಾರು ತರಗತಿಗಳು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭವಾಗಲಿದೆ. ಈಗಿರುವ 02 ಕೊಠಡಿಗಳು ಈ ತರಗತಿಗಳನ್ನು ನಡೆಸಲು ಸಾಲದು. ಆದ್ದರಿಂದ ವಿವಿ ಕಛೇರಿಯ ಮೇಲ್ಗಡೆ ಒಂದು ತಾತ್ಕಾಲಿಕ ಕಟ್ಟಡವನ್ನು ನಿರ್ಮಿಸಲು ದಿನಾಂಕ: 28.10.2014 ರ 23ನೇ ಪ್ರಶಾಸನ ಸಮಿತಿ ಸಭೆಯಲ್ಲಿ ಲೋಕೋಪಯೋಗಿ ಇಲಾಖೆಗೆ ಅಥವಾ ಭೂ ಸೇನೆಗೆ ಈ ಕಾರ್ಯವನ್ನು ವಹಿಸಿಕೊಡಲು ನಿರ್ಣಯಿಸಲಾಗಿತ್ತು. ಅದರಂತೆ ಭೂಸೇನಾ ಇಲಾಖೆಯು ಆ ಇಲಾಖೆಯು ಆ ಕಟ್ಟಡವನ್ನು ನಿರ್ಮಿಸಲು ಒಂದು ವಿಸ್ತೃತ ಪ್ರಸ್ತಾವನೆಯನ್ನು ಮತ್ತು 39 ಲಕ್ಷ ರೂ. ಅಂದಾಜನ್ನು ಸಲ್ಲಿಸಿದೆ. ಆ ಮೊತ್ತವನ್ನು ಬಿಡುಗಡೆಗೊಳಿಸಿ ಕಾರ್ಯಕ್ರಮ ಮಾಡುವ ಸಂಬಂಧ ಅನುಮತಿ ಕೋರಿ ವಿಷಯವನ್ನು ಮಂಡಿಸಿದೆ.

ನಿರ್ಣಯ : **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇರುವ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಕಟ್ಟಡದ ಮೇಲ್ಭಾಗದಲ್ಲಿ ತಾತ್ಕಾಲಿಕ ಕೊಠಡಿಗಳನ್ನು ನಿರ್ಮಿಸಲು ಪ್ರಸ್ತಾವನೆಯೊಂದಿಗೆ 39 ಲಕ್ಷ ಅಂದಾಜನ್ನು ಸಲ್ಲಿಸಿತ್ತು. ಆದರೆ ಈ ಕಾಲೇಜಿನ ಭೂಮಿಯನ್ನು ಸರಕಾರವು ಆದೇಶದ ಮೂಲಕ ನೀಡಿದ್ದರೂ ಖಾತೆಯು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಇನ್ನೂ ಹಸ್ತಾಂತರವಾಗಿಲ್ಲ. ಆದ್ದರಿಂದ ಆದಷ್ಟು ಬೇಗ BBMP ಯಿಂದ ಖಾತಾವನ್ನು ಪಡೆದು ಕಾರ್ಯಾರಂಭ ಮಾಡಲು ಅನುಮತಿ ನೀಡಲಾಯಿತು. ಈ ಕಾರ್ಯ ವಿಳಂಬವಾಗುವ ಸಂಭವವಿದ್ದಲ್ಲಿ ಯಾವುದಾದರೂ ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಳ್ಳಬಹುದೆಂದು ಮಾನ್ಯ ಕುಲಪತಿಗಳು (ಪ್ರ) ಸೂಚಿಸಿದ್ದನ್ನು ಸಭೆಯು ಒಪ್ಪಿತು. ಇದರೊಂದಿಗೆ ಕುಲಪತಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಾರ್ಯಕ್ರಮಗಳಿಗೆ, ಪ್ರಶಾಸನ ಸಮಿತಿ, ಪ್ರಶಿಕ್ಷಣ ಪರಿಷತ್ತಿನ ಸಭೆಗಳಿಗೆ ಸದಸ್ಯರು ಪರವೂರಿನಿಂದ ಬರುವ ಕಾರಣ ಅವರು ತಂಗಲು ಒಂದು ಸುಸಜ್ಜಿತವಾದ 3 BHK ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳಬೇಕೆಂದೂ ಅದನ್ನು ಅತಿಥಿಗೃಹವನ್ನಾಗಿ ಬಳಸಬೇಕೆಂದೂ ಸೂಚಿಸಿದರು. ಸಭೆಯು ಅದಕ್ಕೆ ಅನುಮತಿ ನೀಡಿತು.**

**ವಿಷಯ 8: ಪ್ರಶಿಕ್ಷಣ ಪರಿಷತ್ ಸಭೆಯ ನಿರ್ಣಯಗಳನ್ನು ಅನುಮೋದಿಸುವ ಬಗ್ಗೆ.**

**ಟಿಪ್ಪಣಿ:** ದಿನಾಂಕ: 09.03.2015 ರಂದು ನಡೆದ ಪ್ರಶಿಕ್ಷಣ ಪರಿಷತ್ ಸಭೆಯ ನಿರ್ಣಯಗಳನ್ನು ಅನುಮೋದಿಸಲು ವಿಷಯ ಮಂಡಿಸಲಾಗಿತ್ತು.

ನಿರ್ಣಯ: **ಮಾನ್ಯ ಕುಲಪತಿಗಳು ಈ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯ ಕೊನೆಯಲ್ಲಿ ಪ್ರಸ್ತುತಪಡಿಸಲು ಕೋರಿದರು. ಆದರೆ ಸಮಯಾಭಾವದಿಂದಾಗಿ ಪ್ರಶಿಕ್ಷಣ ಪರಿಷತ್ ಸಭೆಯ ನಿರ್ಣಯಗಳನ್ನು ಅನುಮೋದಿಸಲು ಆಗಲಿಲ್ಲ.**

**ವಿಷಯ 9: (1) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರೊ. ಸಿ. ರಾಮನಾಥನ್ ಇವರ ಪುಸ್ತಕ ಪ್ರಕಟನೆ ಬಗ್ಗೆ.**

**(2) ಶ್ರೀ ವೇಣುಗೋಪಾಲ ಹೆರೂರ ಅವರ ಗಣಿತ ಶಾಸ್ತ್ರದ ಗ್ರಂಥದ ಪ್ರಕಟಣೆಗೆ ಅನುಮತಿ ಕೋರಿ.**

**ಟಿಪ್ಪಣಿ:** **(1)** ಪ್ರೊ. ಸಿ.ರಾಮನಾಥನ್ ಅವರು ಅನುವಾದಿಸಿರುವ ಸಾಂಖ್ಯಪ್ರವಚನ ಭಾಷ್ಯ ವಿಷಯಾಧ್ಯಯವೆಂಬ ಕೃತಿಯ ಪ್ರಕಟಣೆಯ ಕಾರ್ಯ ಅಂತಿಮ ಹಂತದಲ್ಲಿದೆ. ವಿಶ್ವವಿದ್ಯಾಲಯದ ಅಂಗೀಕೃತ ದರಕ್ಕೆ ಅನುಗುಣವಾಗಿ 500 ಪ್ರತಿಗಳ ಅನವಾದಕರಿಗೆ ನಿಯಮಾನುಸಾರ ಅನುವಾದ ಗೌರವಧನ ಮತ್ತು 10 ಗೌರವ ಪ್ರತಿಗಳನ್ನು ನೀಡಲು, ಮುದ್ರಣಕ್ಕೆ ಅನುಮತಿ ನೀಡಲು ಸಭೆಗೆ ಕೋರಿದೆ.

**(2)** ಶ್ರೀ ವೇಣುಗೋಪಾಲ್ ಹೆರೂರ ಅವರ "ಇಪ್ಪತ್ತೊಂದು ಜೊತೆ ಏಕಕಾಲಿಕ ಸಮೀಕರಣಗಳು" ಎಂಬ ಸಂಸ್ಕೃತ ಗ್ರಂಥದ ಕನ್ನಡಾನುವಾದ ಯೋಜನೆಯಡಿಯಲ್ಲಿ ಮುದ್ರಣಕ್ಕಾಗಿ ಸಿದ್ಧತೆ ನಡೆಯುತ್ತದೆ. ಲೇಖಕರು ಸಾಫ್ಟ್ ಮತ್ತು ಹಾರ್ಡ್ ಕಾಪಿಯನ್ನು ಒದಗಿಸಿದ್ದು, ನಾವು ಪ್ರಸಾರಾಂಗದ ಮುದ್ರಣದ ದರಪಟ್ಟಿಯ ಪ್ರಕಾರ ಮುದ್ರಣ ಮಾಡಿಸುವ ಕಾರ್ಯ ಹಾಗೂ ಒಂದು ಬಾರಿ ಕರಡು ನೋಡುವ ಕೆಲಸ ಬಾಕಿ ಇದೆ. ನಂತರ ಮುದ್ರಣ ಕಾರ್ಯ ಪ್ರಾರಂಭವಾಗುತ್ತದೆ.

ನಿರ್ಣಯ : **ಈ ಎರಡೂ ಪುಸ್ತಕಗಳನ್ನು ಪ್ರಕಟಿಸಲು ಸಭೆಯು ಅನುಮೋದನೆ ನೀಡಿತು ಹಾಗೆಯೇ ಭವಿಷ್ಯದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಸಹಯೋಗದೊಂದಿಗೆ ಪುಸ್ತಕಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಿಸಲು ಸಭೆಯು ಅನುಮತಿ ನೀಡಿತು.**

**ವಿಷಯ 10: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಜಮೀನಿನ ಬಗ್ಗೆ ವರದಿ.**

**ಟಿಪ್ಪಣಿ:** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮಾಗಡಿ ತಾ, ರಾಮನಗರ ಜಿಲ್ಲೆ, ತಿಪ್ಪಸಂದ್ರ ಹೋ, ಹತ್ತಿರ ಕರ್ನಾಟಕ ಸರ್ಕಾರವು 100 ಎಕರೆ ಜಮೀನನ್ನು ನೀಡಿದ್ದು ಅದರ ಎಲ್ಲಾ ಪಕ್ರಿಯೆಗಳು ಕೊನೆಯ ಹಂತದಲ್ಲಿದ್ದು ಖಾತಾ ಕೂಡ ಸಿದ್ದವಿದೆ. ಮಾನ್ಯ ಕುಲಸಚಿವರು ತಿಂಗಳಿಗೊಂದು ಬಾರಿ ಆ ಜಮೀನಿನ ಆವರಣ ಮೇಲ್ವಿಚಾರಕರಾದ ವಿದ್ವಾನ್ ಎಂ. ರಾಜಣ್ಣ ಅವರೊಂದಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಮಾಗಡಿ ತಾಲೂಕಿನ ತಹಶೀಲ್ದಾರರೊಂದಿಗೆ ಮಾತುಕತೆ ನಡೆಸಿದ್ದು ಸರ್ವೆ ಬಾಕಿ ಇದ್ದು ಅದನ್ನು ಶೀಘ್ರವಾಗಿ ಕೈಗೆತ್ತುಕೊಳ್ಳಲು ವಿನಂತಿಸಿ, ಆ ಸರ್ವೆಗೆ ಆಗುವ ಕನಿಷ್ಠ ಖರ್ಚು–ವೆಚ್ಚವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಭರಿಸಲು ಸಿದ್ದವಿದೆ ಎಂದು ತಿಳಿಸುತ್ತಾ ಇದರೊಂದಿಗೆ ಮಾಗಡಿ ವಿಧಾನ ಸಭಾ ಕ್ಷೇತ್ರದ ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಎಚ್.ಸಿ ಬಾಲಕೃಷ್ಣ ರವರೊಂದಿಗೆ ಈ ಸಂಬಂಧ ಹಲವಾರು ಬಾರಿ ಮಾತುಕತೆ ನಡೆಸಿದ್ದಾರೆ. ಮಾನ್ಯ ಕುಲಪತಿಗಳು ಸಹ ಈ ಪ್ರಕ್ರಿಯೆ ಬೇಗ ಮುಗಿದು ಜಮೀನನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಹಸ್ತಾಂತರ ಮಾಡಲು ಮಾನ್ಯ ಶಾಸಕರನ್ನು ಕೋರಿದ್ದಾರೆ. ಇದನ್ನು ಸಭೆಗೆ ಮಂಡಿಸಲಾಗಿದೆ.

ನಿರ್ಣಯ : **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಮೀನಿಗೆ ಸಂಬಂಧಿಸಿದ ಸರ್ವೆಯನ್ನು ಸರ್ಕಾರದ ವತಿಯಿಂದ ವಿಳಂಬವಾದ ಪಕ್ಷದಲ್ಲಿ ಅಧಿಕೃತವಾಗಿ ಗುರುತಿಸಿರುವ ಖಾಸಗಿ ಸಂಸ್ಥೆಗಳಿಂದ ಸರ್ವೆ ಮಾಡಿಸಬಹುದೆಂದು ಸಭೆಯು ಸೂಚಿಸಿತು. ಕರ್ನಾಟಕ ಸರ್ಕಾರದ ಪರವಾಗಿ ಒಬ್ಬರು ವಾಸ್ತುಶಿಲ್ಪಿಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಟ್ಟಡವನ್ನು ನಿರ್ಮಿಸುವ ಸಂದರ್ಭದಲ್ಲಿ ಹೊರಗುತ್ತಿಗೆಯ ಮೇಲೆ ನೇಮಿಸಿಕೊಳ್ಳಲು ಸಭೆಯು ಒಪ್ಪಿತು. ಕಟ್ಟಡ ನಿರ್ಮಾಣಕ್ಕೆ ಭಾರೀ ಹಣ ಬೇಕಾಗುವ ಹಿನ್ನೆಲೆಯಲ್ಲಿ ಕಸಂವಿಯು ತೆರಿಗೆ ವಿನಾಯಿತಿ ತೆಗೆದುಕೊಳ್ಳಲು 80G, 32B ವಿನಾಯಿತಿಗೆ ಕೇಂದ್ರ ಸರ್ಕಾರಕ್ಕೆ ಆವೇದನ ಪತ್ರ ಸಲ್ಲಿಸಲು ಸಭೆಯು ಸೂಚಿಸಿತು. ಇದಕ್ಕೆ ಸಂಬಂಧಿಸಿದಂತೆ ಕಸಂವಿಯು ಒಂದು ಕಟ್ಟಡ ಅಭಿವೃದ್ಧಿ ಸಮಿತಿಯನ್ನು ಬೇರೆ ವಿಶ್ವವಿದ್ಯಾಲಯಗಳ ಮಾದರಿಯಲ್ಲಿ ಸ್ಥಾಪಿಸಲು ಸೂಚಿಸಿತು.**

**ವಿಷಯ 11: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಚಾರಣಾ ಪ್ರಾಧಿಕಾರಕ್ಕೆ ನ್ಯಾಯಾಧೀಶರನ್ನು ನೇಮಿಸುವ ಬಗ್ಗೆ.**

**ಟಿಪ್ಪಣಿ:** ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರಾದ ಶ್ರೀ ಆರ್.ವಿ ದೇಶಪಾಂಡೆ ಅವರ ಘನ ಅಧ್ಯಕ್ಷತೆಯಲ್ಲಿ ದಿನಾಂಕ: 30.06.2014 ರಂದು ನಡೆದ ಸಭೆಯಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಮಾನ್ಯ ಕುಲಪತಿಗಳು ಭಾಗವಹಿಸಿದ್ದರು. ಅಲ್ಲಿ

ತೆಗೆದುಕೊಂಡ ನಿರ್ಣಯದಂತೆ ಪ್ರತಿಯೊಂದು ವಿಶ್ವವಿದ್ಯಾಲಯದಲ್ಲಿ ವಿಚಾರಣಾ ಪ್ರಾಧಿಕಾರವನ್ನು ಸ್ಥಾಪಿಸಬೇಕೆಂದು ನಿರ್ಣಯಿಸಿದರು. ಅದರಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು(ಪ್ರ) ಈ ವಿಷಯವನ್ನು ದಿನಾಂಕ: 28.10.2014 ರ ಪ್ರಶಾಸನ ಸಮಿತಿಯ 23ನೇ ಸಭೆಯಲ್ಲಿ ಈ ಅಂಶವನ್ನು (ವಿಷಯ–11, ಪುಟ–6 ರಲ್ಲಿ) ಪ್ರಸ್ತಾಪಿಸಿದ್ದು, ವಿಚಾರಣಾ ಪ್ರಾಧಿಕಾರ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ. ಸಭೆಯು ನಿವೃತ್ತ ಜಿಲ್ಲಾ ನ್ಯಾಯಾಧೀಶರ ಸಂಭಾವ್ಯ ಪಟ್ಟಿಯನ್ನು ನೀಡಲು ಸೂಚಿಸಿತ್ತು. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಅವರ ಸಲಹೆಯಂತೆ ಕಛೇರಿ ನಿರ್ವಹಣೆಗಾಗಿ ಇಬ್ಬರು ಸಹಾಯಕ ಸಿಬ್ಬಂದಿಯನ್ನು ಪ್ರತ್ಯಾಯೋಜನೆಯ ಮೇಲೆ ನೇಮಿಸಲು ಸಭೆಯು ಅನುಮತಿ ನೀಡುವುದರ ಜೊತೆಗೆ, ಈ ಕೆಳಕಂಡ ನಿವೃತ್ತ ಜಿಲ್ಲಾ ನ್ಯಾಯಾಧೀಶರ ಸಂಭಾವ್ಯ ಪಟ್ಟಿಯನ್ನು ನೀಡಲಾಗಿದೆ. ಇದರಲ್ಲಿ

1. ನ್ಯಾಯಮೂರ್ತಿ ಶ್ರೀ ಹೆಗಡೆ ನಗರೆ ರಮೇಶ್
2. ನ್ಯಾಯಮೂರ್ತಿ ಶ್ರೀ ರವೀಂದ್ರ ವೈದ್ಯ
3. ನ್ಯಾಯಮೂರ್ತಿ ಶ್ರೀ ಎಚ್.ಎನ್. ಕೃಷ್ಣ
4. ನ್ಯಾಯಮೂರ್ತಿ ಶ್ರೀ ರಾಧಾಕೃಷ್ಣ ಹೊಳ್ಳ
5. ನ್ಯಾಯಮೂರ್ತಿ ಶ್ರೀ ಕೆಂಚೇಗೌಡ
6. ನ್ಯಾಯಮೂರ್ತಿ ಶ್ರೀ ಕೆದಿಲಾಯ

ಈ ಮೇಲ್ಕಂಡ ಮಾನ್ಯ ನ್ಯಾಯಾಧೀಶರಲ್ಲಿ ಒಬ್ಬರನ್ನು ವಿಚಾರಣಾ ಪ್ರಾಧಿಕಾರಕ್ಕೆ ನ್ಯಾಯಾಧೀಶರನ್ನಾಗಿ ನೇಮಿಸಲು ಹಾಗೂ ಸದರಿ ವಿಚಾರಣಾ ಪ್ರಾಧಿಕಾರದ ನ್ಯಾಯಾಧೀಶರಿಗೆ ಗೌರವಧನದ ಬಗ್ಗೆಯೂ ಈ ಸಭೆಯ ನಿರ್ಣಯವನ್ನು ಕೋರಿತ್ತು.

ನಿರ್ಣಯ : **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಚಾರಣಾ ಪ್ರಾಧಿಕಾರವನ್ನು ಒಂದು ವರ್ಷದ ಅವಧಿಗೆ ಸ್ಥಾಪಿಸಲು ನಿರ್ಣಯಿಸಲಾಯಿತು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಪರಿಶೀಲಿಸುವುದು ಹಾಗೂ ಈಗ ನೀಡಿರುವ ಸಂಭಾವ್ಯ ಪಟ್ಟಿಯಲ್ಲಿರುವ ನ್ಯಾಯಮೂರ್ತಿಗಳ ಪರಿಚಯ ಪತ್ರ ಹಾಗೂ ಅವರ ಒಪ್ಪಿಗೆ ಪತ್ರಗಳನ್ನು ತೆಗೆದುಕೊಂಡು ಮುಂದಿನ ಪ್ರಶಾಸನ ಸಮಿತಿ ಸಭೆಯಲ್ಲಿ ಒಪ್ಪಿಗೆಗೆ ಇಡಲು ಸಭೆಯು ಸೂಚಿಸಿತು.**

**ವಿಷಯ 12: ವಿದ್ವಾನ್ ಪ್ರಕಾಶ್ ಆರ್. ಪಾಗೋಜಿ –ಇವರ ಮೇಲೆ ದಿನಾಂಕ: 07.01.2015ರ ಸರ್ಕಾರದ ಪತ್ರದ ಸೂಚನೆಯಂತೆ ತನಿಖೆ ಮುಂದುವರಿಕೆ ಮತ್ತು ನಿಯಮಾನುಸಾರ ಶಿಸ್ತುಕ್ರಮ ಜರುಗಿಸುವ ಬಗ್ಗೆ.**

**ಟಿಪ್ಪಣಿ:** ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಗಂಗಾಧರಪ್ಪ ಬಿ.ಓ, ಮೈಸೂರು ಇವರು ಕ.ಸಂ.ವಿಯ ಉಪಕುಲಸಚಿವರಾದ "ಶ್ರೀ ಪ್ರಕಾಶ್ ಆರ್. ಪಾಗೋಜಿ ಇವರು ಅನರ್ಹ ಅರ್ಜಿಯ ಜೊತೆಗೆ ಸುಳ್ಳು ಪ್ರಮಾಣ ಪತ್ರಗಳನ್ನು ಸಲ್ಲಿಸಿ ಕಸಂವಿಯ ಉಪಕುಲಸಚಿವರ ಹುದ್ದೆಗೆ ನೇಮಕಗೊಂಡಿರುವ ಬಗ್ಗೆ" ಮಾನ್ಯ ಕುಲಾಧಿಪತಿಗಳು ಹಾಗೂ ಘನತೆವೆತ್ತ ರಾಜ್ಯಪಾಲರಿಗೆ 15.03.2013 ರಂದು ಮತ್ತು ಸರ್ಕಾರಕ್ಕೆ 21.03.2013ರಂದು ದೂರು ಸಲ್ಲಿಸಿರುತ್ತಾರೆ.

ಸದರಿಯವರ ವಿರುದ್ಧ ಉಚ್ಚನ್ಯಾಯಾಲಯದಲ್ಲಿ ಈ ನೇಮಕಾತಿಯ ವಿರುದ್ಧ ಮೊಕದ್ದಮೆಯನ್ನು ದಾಖಲಿಸಿದ್ದರು. [ರಿಟ್ ಪಿಟಿಷನ್ ನಂ: 21896/2013(ಎಸ್)]. ಇದಕ್ಕೆ ಪ್ರತಿಯಾಗಿ ಶ್ರೀ ಪ್ರಕಾಶ್ ಆರ್. ಪಾಗೋಜಿಯವರು 09.10.2014 ರಂದು ಉತ್ತರವನ್ನು ನೀಡಿದ್ದರು. 26.04.2013 ರಂದು ಉನ್ನತ ಶಿಕ್ಷಣ ಇಲಾಖೆಯು ಉಪಕಾರ್ಯದರ್ಶಿಗಳು ಕಸಂವಿಯ ಬೋಧಕ/ಬೋಧಕೇತರ ಸಿಬ್ಬಂದಿ ನೇಮಕಾತಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿ ಮೂಲದಾಖಲೆಗಳೊಂದಿಗೆ ವರದಿಯನ್ನು ನೀಡಲು ನಿರ್ದೇಶಿಸಿದ್ದರು. (ಇಡಿ 152 ಯುಆರ್‌ಸಿ 2013) ಅದರಂತೆ ಅಂದಿನ ಕುಲಸಚಿವರಾದ ವೈ.ಎಸ್. ಸಿದ್ಧೇಗೌಡ ಇವರು 17.08.2013 ರಂದು 8 ಪುಟಗಳ ಉತ್ತರವನ್ನು ನೀಡಿದ್ದರು. 19.02.2014 ರಂದು ಅಂದಿನ ಕುಲಸಚಿವರಾದ ಪ್ರೊ ಪಿ ಬಿ ಸಂತಪ್ಪನವರು ತಮ್ಮ ಅಧಿಕಾರಕ್ಕೆ ಮೀರಿ ಕೆಲಸ ಮಾಡಿದ "ಶ್ರೀ ಪ್ರಕಾಶ್ ಆರ್. ಪಾಗೋಜಿಯವರಿಗೆ ಮುನ್ನೆಚ್ಚರಿಕೆಯ ಪತ್ರ ನೀಡಿದ್ದರು" ಹಾಗೂ 30.05.2014ರಂದು ಅವರ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಅಮಾನತ್ತಿನಲ್ಲಿ ಇಟ್ಟು ಆದೇಶ ಹೊರಡಿಸಿದ್ದರು. 13.06.2014ರ ಪ್ರಶಾಸನ ಸಮಿತಿ ಸಭೆಯಲ್ಲಿ ಈ ವಿಷಯವು ಚರ್ಚೆಯಾಗಿ ಸಭೆಯು ಹಿಂದಿನ ಕುಲಸಚಿವರು ಕುಲಪತಿಗಳ ಅವಗಾಹನೆಗೆ ತರದೇ, ಪ್ರಶಾಸನ ಸಮಿತಿ ಸಭೆಯ ಅನುಮತಿ ತೆಗೆದುಕೊಳ್ಳದೆ ಅಮಾನತ್ತು ಮಾಡಿದ್ದರಿಂದ, ಅದನ್ನು ಅನೂರ್ಜಿತಗೊಳಿಸಿತು.

ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ ಇಡಿ 105 ಯುಎನ್ಇ 2014 ದಿ. 16.08.2014ರ "ತುರ್ತು" ಪತ್ರದ ಒಕ್ಕಣೆಯಂತೆ "ದೂರುಗಳನ್ನು ಪರಿಶೀಲಿಸಿದ್ದು, ಅದರಂತೆ ಶ್ರೀ ಪ್ರಕಾಶ್ ಆರ್ ಪಾಗೋಜಿ ಇವರನ್ನು ಉಪಕುಲಸಚಿವರ ಹುದ್ದೆಗೆ ಅಕ್ರಮವಾಗಿ ನೇಮಕ ಮಾಡಿರುವುದಾಗಿ ಕಂಡು ಬರುತ್ತದೆ. ಆದ್ದರಿಂದ, ಶ್ರೀ ಪ್ರಕಾಶ್ ಆರ್.ಪಾಗೋಜಿ ಇವರ ನೇಮಕಾತಿ ಆದೇಶವನ್ನು ಕೂಡಲೇ ರದ್ದುಪಡಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುವಂತೆ ಹಾಗೂ ಶ್ರೀ ಗಂಗಾಧರಪ್ಪ ಬಿ. ಓ. ಇವರು ಸಲ್ಲಿಸಿರುವ ದೂರಿನ ಬಗ್ಗೆ ಪರಿಶೀಲಿಸಿ, ತನಿಖೆ ನಡೆಸಿ, ತನಿಖಾ ವರದಿಯನ್ನು 10 ದಿವಸಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ" ಸರ್ಕಾರದ ಅಧೀನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು) ನಿರ್ದೇಶಿಸಿದ್ದರು. ಅದರಂತೆ ಕುಲಸಚಿವರು ಬಹಳ ಗೌಪ್ಯವಾದ ಒಂದು ಕಡತವನ್ನು ಪ್ರಾರಂಭಿಸಿ (ಕಸಂವಿ/ಸಿಬ್ಬಂದಿ/ಶಿಸ್ತಿನ ಕ್ರಮ–01/2014–15) ಮಾನ್ಯ ಪ್ರಭಾರ ಕುಲಪತಿಗಳಿಗೆ 25.08.2014ರಂದು ಶ್ರೀ ಪ್ರಕಾಶ್ ಆರ್ ಪಾಗೋಜಿ ಇವರ ತನಿಖೆ/ವಿಚಾರಣೆ ಖಾದಿರಿಸಿ ತಕ್ಷಣದಲ್ಲಿ ಅಮಾನತ್ತಿನಲ್ಲಿಡಲು ಕಡತವನ್ನು ಸಲ್ಲಿಸಿದ್ದರು. ಮಾನ್ಯ ಕುಲಪತಿಗಳು ಕಸಂವಿಯ ಹಿರಿಯ ನ್ಯಾಯವಾದಿಗಳ ಅಭಿಪ್ರಾಯವನ್ನು ಪಡೆದು, ಪ್ರಶಾಸನ ಸಮಿತಿಯಲ್ಲಿ ಇಡಲು ಆದೇಶಿಸಿದ್ದರು.

ಉನ್ನತ ಶಿಕ್ಷಣ ಇಲಾಖೆಯ ಪತ್ರದ ಸೂಚನೆಯಂತೆ ಕುಲಸಚಿವರು ದಿ. 01.09.2014ರಂದು ಐದು ಜನ ಸದಸ್ಯರ ತನಿಖಾಪಟ್ಟಿ (ಸಂಭಾವ್ಯವನ್ನು) ಅನುಮೋದಿಸಲು ಮಾನ್ಯ ಪ್ರಭಾರ ಕುಲಪತಿಗಳಿಗೆ ಕಡತ ಸಲ್ಲಿಸಿದ್ದರು. ಇವೆಲ್ಲವನ್ನೂ 13.010.2014ರ ಪ್ರಶಾಸನ ಸಮಿತಿಯ 23ನೇ ಸಭೆಯಲ್ಲಿ ಮಂಡಿಸಲಾಗಿತ್ತು. ಅಂದು ಪ್ರಶಾಸನ ಸಮಿತಿ ಸಭೆಯು ಕೈಗೊಂಡ ನಿರ್ಣಯ ಕೆಳಕಂಡಂತಿದೆ.

ವಿದ್ವಾನ್ ಪಿ. ಆರ್. ಪಾಗೋಜಿ, ಅವರು ಉಪಕುಲಸಚಿವರ ಹುದ್ದೆಯಲ್ಲಿ ಖಾಯಂಪೂರ್ವ ಸೇವಾ ಅವಧಿಯನ್ನು ಪೂರೈಸಿದ್ದರೂ, ಸರ್ಕಾರವು ಶಿಸ್ತಿನ ಕ್ರಮವನ್ನು ಕೈಗೊಂಡು ವರದಿಯನ್ನು ಸಲ್ಲಿಸಬೇಕೆಂದು ನಿರ್ದೇಶಿಸಿದ್ದರಿಂದ ಈ ಕೆಳಕಂಡ ಅಂಶಗಳನ್ನು ಕಸಂವಿಯು ಕೈಗೊಳ್ಳಲು ಪ್ರಶಾಸನ ಸಮಿತಿ ಸಭೆಯು ನಿರ್ದೇಶಿಸಿತು.

ಅ) ಖಾಯಂಪೂರ್ವ ಸೇವಾವಧಿ ಘೋಷಣೆಯ ವಿಷಯವನ್ನು ಮುಂದೂಡಲಾಯಿತು.

ಆ) ಸದರಿಯವರ ನೇಮಕಾತಿ/ಅವ್ಯವಹಾರಕ್ಕೆ ಸಂಬಂಧಿಸಿದಂತೆ ಕಸಂವಿಯು ಸರ್ಕಾರಕ್ಕೆ ವಿಸ್ತೃತವಾದ ಮಾಹಿತಿಯನ್ನು ಸಿದ್ಧಪಡಿಸಿ ಜರೂರು ಕಳುಹಿಸತಕ್ಕದ್ದು. ಈ ಮಾಹಿತಿಯಲ್ಲಿ ಉಪಕುಲಸಚಿವ ನೇಮಕಾತಿಗೆ ಸಂಬಂಧಿಸಿದ ಎಲ್ಲ ಪರ–ವಿರೋಧ ಅಂಶಗಳನ್ನು ಸತ್ಯಾಂಶಗಳೊಂದಿಗೆ ವರದಿ ಮಾಡತಕ್ಕದ್ದು. ಈ ಹಿನ್ನೆಲೆಯಲ್ಲಿ ಇದಕ್ಕೆ ಸಂಬಂಧಿಸಿದ ಸರ್ಕಾರದ ಆದೇಶ, ಕಸಂವಿಯು ನೇಮಕ ಮಾಡಿರುವ ನ್ಯಾಯವಾದಿಗಳ ಅಭಿಪ್ರಾಯಗಳು ಮುಂತಾದ ಸಮಸ್ತ ಅಂಶಗಳನ್ನು ವಸ್ತುನಿಷ್ಠವಾಗಿ ಸಿದ್ಧಪಡಿಸಿ ಸರ್ಕಾರಕ್ಕೆ ಆದಷ್ಟು ಶೀಘ್ರವೇ ಕಳುಹಿಸತಕ್ಕದ್ದು.

ಇ) ಈ ಪ್ರಕರಣವು ನ್ಯಾಯಾಲಯದ ವಿಚಾರಣೆಯಲ್ಲಿ ಇರುವಾಗ ಯಾವ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದ ಸ್ಪಷ್ಟ ನಿರ್ದೇಶನವನ್ನು ಕೋರುವುದು.

13.10.2014ರ 23ನೇ ಪ್ರಶಾಸನ ಸಮಿತಿ ನಡಾವಳಿಯಂತೆ ಕುಲಸಚಿವರು ವಿದ್ವಾನ್ ಪಿ. ಆರ್. ಪಾಗೋಜಿ ಯವರ ನೇಮಕಾತಿ ಬಗೆಗಿನ ದೂರು/ವಾಸ್ತವ ವರದಿಗೆ ಸಂಬಂಧಿಸಿದಂತೆ ವಿಸ್ತಾರವಾದ ವರದಿಯನ್ನು ಸರ್ಕಾರಕ್ಕೆ 20.10.2014ರಂದು ಸಲ್ಲಿಸಿ ಯಾವ ಕ್ರಮ ತೆಗೆದುಕೊಳ್ಳಬೇಕೆಂದು ಸ್ಪಷ್ಟವಾದ ನಿರ್ದೇಶನವನ್ನು ಕೋರಿದ್ದರು. ಮಾನ್ಯ ಮುಖ್ಯಮಂತ್ರಿಯವರ ಅಧೀನ ಕಾರ್ಯದರ್ಶಿಯವರು 14.10.2014ರಂದು ತಮ್ಮ ಪತ್ರ ಸಂಖ್ಯೆ ಸಿ ಎಮ್/60825 ರೆಪ್– ಜನರಲ್ 2014 ನಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದರು.

ವಿದ್ವಾನ್ ಪಿ.ಆರ್. ಪಾಗೋಜಿ, ಉಪಕುಲಸಚಿವರು, ಕ.ಸಂ.ವಿ., ಇವರ ಪೋಲೀಸ್ ತಪಾಸಣಾ ವರದಿಯು ಬಂದಿದ್ದು, ನ್ಯಾಯಾಲಯದಲ್ಲಿರುವ ಪ್ರಕರಣದ ಅಂತಿಮ ತೀರ್ಪಿಗೆ ಒಳಪಟ್ಟು ಖಾಯಂಪೂರ್ವ ಸೇವಾವಧಿಯನ್ನು ಘೋಷಿಸುವಂತೆ ಸದರಿಯವರು ಪತ್ರ ನೀಡಿರುತ್ತಾರೆ. ಸಭೆಯಲ್ಲಿ ಚರ್ಚೆಗಾಗಿ ಮಂಡಿಸಿತ್ತು. ಸಭೆಯು ಈ ರೀತಿ ನಿರ್ಣಯವನ್ನು ಕೈಗೊಂಡಿತು.

ವಿದ್ವಾನ್ ಪಿ.ಆರ್. ಪಾಗೋಜಿ, ಉಪಕುಲಸಚಿವರು, ಕ.ಸಂ.ವಿ., ಇವರಿಗೆ ಸಂಬಂಧಿಸಿದಂತೆ ಎಲ್ಲ ವಿಷಯಗಳನ್ನು ವಿಸ್ತೃತವಾಗಿ ಸಭೆಯು ಚರ್ಚಿಸಿತು. ಕರ್ನಾಟಕ ನಾಗರೀಕ ಸೇವಾ ನಿಯಮಗಳು 1977ರ ಅನ್ವಯ ಖಾಯಂಪೂರ್ವ ಸೇವಾವಧಿಯ ಘೋಷಣೆಯ ಬಗೆಗೆ ಸ್ಪಷ್ಟವಾಗಿ ಉಲ್ಲೇಖಿಸಿರುವಂತೆ ಯಾವುದೇ

ಸಿಬ್ಬಂದಿಯ ನೇಮಕಾತಿಯ ವಿಚಾರಣೆಯು ನ್ಯಾಯಾಲಯದಲ್ಲಿರುವಾಗ ಅಂತಹ ವ್ಯಕ್ತಿಯ ಖಾಯಂಪೂರ್ವ ಸೇವಾವಧಿಯು ತೃಪ್ತಿಕರವಾಗಿದ್ದಾಗ, ಸದರಿ ಪ್ರಕರಣ ಅಂತಿಮ ತೀರ್ಪಿಗೆ ಒಳಪಟ್ಟು ಮತ್ತು ಸರ್ಕಾರದ ತನಿಖೆಯ ಅಂತಿಮ ತೀರ್ಪಿಗೆ ಒಳಪಟ್ಟು ಖಾಯಂಪೂರ್ವ ಸೇವಾವಧಿಯನ್ನು ಘೋಷಿಸಬಹುದಾಗಿದೆ. ಸದರಿಯವರ ಸೇವೆಯು ತೃಪ್ತಿಕರವಾಗಿರುವುದರಿಂದ ಮತ್ತು ಇವರ ವಿರುದ್ಧ ಯಾವುದೇ ಪೋಲೀಸ್ ಪ್ರಕರಣವು ಇಲ್ಲದಿರುವುದರಿಂದ ನಿಯಮಾನುಸಾರ ಖಾಯಂಪೂರ್ವ ಸೇವಾವಧಿಯು ಮುಗಿದ ದಿನದಿಂದ ಅನ್ವಯವಾಗುವಂತೆ ಘೋಷಿಸುವ ಆದೇಶಪತ್ರವನ್ನು ಹೊರಡಿಸಬಹುದೆಂದು ಸಭೆಯು ನಿರ್ಣಯಿಸಿತು.

ಉನ್ನತ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿಗಳು ತಮ್ಮ ಪತ್ರ ಸಂಖ್ಯೆ: ಇಡಿ 105 ಯು ಎನ್ ಇ 2014 ದಿ: 21.010.2014 ರಂದು ವಿದ್ವಾನ್ ಪಿ.ಆರ್.ಪಾಗೋಜಿ ಇವರು ನ್ಯಾಯಾಲಯದಲ್ಲಿ ತಮ್ಮ ಮೇಲೆ ವಿಶ್ವವಿದ್ಯಾಲಯ ಹಾಗೂ ಸರ್ಕಾರದ ವಿರುದ್ಧ ತಮ್ಮ ಬಗ್ಗೆ ಶಿಸ್ತುಕ್ರಮ ಕೈಗೊಳ್ಳಬಾರದೆಂದು ಉಚ್ಚನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದು, ಸದರಿಯವರ ವಿರುದ್ಧ ಮೊಕದ್ದಮೆ ಹೂಡಿರುವ ಫಿರ್ಯಾದುದಾರರು ಈಗಾಗಲೇ ಪ್ರೊಬೇಷನರಿ ಅವಧಿಯನ್ನು ಘೋಷಿಸಬಾರದೆಂಬ ಪತ್ರವನ್ನು ನೀಡಿದ್ದರು. ಮಾನ್ಯ ಉಚ್ಚ ನ್ಯಾಯಾಲಯವು ಅವರ ಮನವಿಯನ್ನು ತಿರಸ್ಕರಿಸಿದ್ದರಿಂದ ಸರ್ಕಾರದ ಹಿಂದಿನ ಶಿಸ್ತಿನ ಕ್ರಮ ಮುಂದುವರೆದಿರುವುದರಿಂದ, ಕುಲಸಚಿವರು ತಮ್ಮ ಹಂತದಲ್ಲಿ ಖಾಯಂಪೂರ್ವ ಸೇವಾವಧಿಯ ಘೋಷಣೆ ಮಾಡಲು ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದರು.

ಸರ್ಕಾರವು ದಿ: 07.01.2015ರಂದು "ತುರ್ತು" ಪತ್ರ ಸಂಖ್ಯೆ ಇಡಿ 105, ಯು ಎನ್ ಇ 2014ರಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಯವು ಸದರಿಯವರ ವಿರುದ್ಧ ಸಲ್ಲಿಸಿರುವ ದೂರುಗಳನ್ನು ಪರಿಶೀಲಿಸಿ, ತನಿಖೆಯನ್ನು ಮುಂದುವರಿಸಿ ಸರ್ಕಾರಕ್ಕೆ ವರದಿ ನೀಡುವಂತೆ ನಿರ್ದೇಶಿಸಿದ್ದರು. ಮಾನ್ಯ ಪ್ರಭಾರಿ ಕುಲಪತಿಗಳು ಈ ಅಂಶವನ್ನು ಮುಂಬರುವ ಪ್ರಶಾಸನ ಸಮಿತಿ ಸಭೆಯಲ್ಲಿ ಇಡಲು ಸೂಚಿಸಿದ್ದರು. ಅದರಂತೆ ವಿದ್ವಾನ್ ಪ್ರಕಾಶ್ ಆರ್. ಪಾಗೋಜಿಯವರ ನೇಮಕಾತಿ ವಿಷಯದಲ್ಲಿ ತನಿಖೆ ನಡೆಸಿ, ಶಿಸ್ತುಕ್ರಮ ಕೈಗೊಳ್ಳುವ, ಬಗೆಗೆ ಚರ್ಚಿಸಲು ಸಭೆಯಲ್ಲಿ ಮಂಡಿಸಲಾಗಿತ್ತು.

**ನಿರ್ಣಯ:** **ಉನ್ನತ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರದಿಂದ ಬಂದ ಪತ್ರ ಸಂಖ್ಯೆ: ಇಡಿ 105 ಯುಎನ್ಇ 2014 ದಿನಾಂಕ: 07.01.2015ರ ತುರ್ತು ಪತ್ರದ ಆಧಾರದ ಮೇಲೆ ವಿದ್ವಾನ್ ಪ್ರಕಾಶ್ ಆರ್. ಪಾಗೋಜಿಯವರ ನೇಮಕಾತಿಗೆ ಸಂಬಂಧಿಸಿದಂತೆ ಎಲ್ಲಾ ಸದಸ್ಯರೂ ಚರ್ಚಿಸಿದರು. ಹಿಂದಿನ ಪ್ರಶಾಸನ ಸಭೆಗಳಲ್ಲಿ ಈ ಚರ್ಚೆಯು ನಡೆದಿದ್ದು ನೇಮಕಾತಿ ವಿಷಯದಲ್ಲಿ ಶ್ರೀ ಗಂಗಾಧರಪ್ಪ ಬಿ. ಒ ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವುದರಿಂದ [WRIT petition No: 21896/2013(s)] ಮತ್ತು ಆ ಮೊಕದ್ದಮೆಯಲ್ಲಿ ವಿಶ್ವವಿದ್ಯಾಲಯವು ಪ್ರತಿವಾದಿಯಾಗಿರುವುದರಿಂದ, ಕಸಂವಿಯ ಕಾನೂನು ತಜ್ಞರ ಅಭಿಪ್ರಾಯದಂತೆ ವಿಶ್ವವಿದ್ಯಾಲಯವು ಯಾವುದೇ ತನಿಖೆ ನಡೆಸುವುದು ಹಾಗೂ ಕ್ರಮ ತೆಗೆದುಕೊಳ್ಳುವುದು ನ್ಯಾಯಾಂಗ ನಿಂದನೆಯಾಗುತ್ತದೆ. ಈಗಾಗಲೇ ಈ ವಿಷಯಕ್ಕೆ ಸಂಬಂಧಿಸಿದಂತೆ ಹಿಂದಿನ ಕುಲಪತಿಗಳು/ ಕುಲಸಚಿವರು ವಿಸ್ತೃತವಾದ ಉತ್ತರವನ್ನು ನೀಡಿದ್ದು, ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ. ಸರಕಾರದ ಕಾರ್ಯದರ್ಶಿ ದರ್ಜೆಯ ಅಧಿಕಾರಿಗಳೂ ವಿಶ್ವವಿದ್ಯಾಲಯದ ದಾಖಲೆಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ಯಾವುದೇ ತನಿಖೆಯನ್ನು ನಡೆಸುವುದು ನಿಯಮಾನುಸಾರ ಕ್ರಮ ತೆಗೆದುಕೊಳ್ಳಲು ಸೂಕ್ತವಲ್ಲ ಎಂದು ಪ್ರಶಾಸನ ಸಭೆಯು ನಿರ್ಣಯಿಸಿ ಈ ವಿಷಯವನ್ನು ಸರ್ಕಾರಕ್ಕೆ ವರದಿ ಮಾಡಲು ಸೂಚಿಸಿತು. ಕುಲಸಚಿವರು ಈ ವಿಷಯದಲ್ಲಿ ತಮ್ಮ ಅಭಿಪ್ರಾಯ ಭೇದವನ್ನು ವ್ಯಕ್ತಪಡಿಸಿದರು.**

**ವಿಷಯ 13:** **ಶ್ರೀ ಸಿದ್ಧಯ್ಯ ಎಸ್. ಇವರ ವೇತನಶ್ರೇಣಿಯ ವ್ಯತ್ಯಾಸವನ್ನು ಸರಿಪಡಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಪತ್ರ ಕಳುಹಿಸಲು ಹಿಂದಿನ ಪ್ರಶಾಸನ ಸಮಿತಿ ಸಭೆಯು ಸೂಚಿಸಿತ್ತು. ಸರ್ಕಾರದ ವರದಿಯನ್ನು ನಿರ್ಣಯಿಸುವ ಬಗ್ಗೆ.**

**ಟಿಪ್ಪಣಿ:** ಹಿಂದಿನ ಪ್ರಶಾಸನ ಸಮಿತಿ ಸಭೆಯ ಅನುಮೋದನೆಯಂತೆ ಶ್ರೀ ಸಿದ್ಧಯ್ಯ ಎಸ್. ಇವರ ವೇತನ ಶ್ರೇಣಿಯ ವ್ಯತ್ಯಾಸವನ್ನು ಸರಿಪಡಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಪತ್ರ ಕಳುಹಿಸಿದ್ದು, ಸರ್ಕಾರದಿಂದ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 10.03.2015ರಂದು ಶ್ರೀ ಸಿದ್ಧಯ್ಯ ಎಸ್. ವಿಶ್ರಾಂತಿ ಗೃಹ ಮೇಲ್ವಿಚಾರಕರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರ ವೇತನ ಶ್ರೇಣಿಯ ವ್ಯತ್ಯಾಸವನ್ನು ತಮ್ಮ ಹಂತದಲ್ಲಿಯೇ ಸರಿಪಡಿಸಿ ಕ್ರಮ ತೆಗೆದುಕೊಳ್ಳುವಂತೆ ಈ ಮೂಲಕ ನಿರ್ದೇಶಿಸಿರುತ್ತದೆ. ಸದರಿ ವಿಷಯವನ್ನು ಸಭೆಯ ನಿರ್ಣಯಕ್ಕಾಗಿ ಪ್ರಶಾಸನ ಸಮಿತಿಯಲ್ಲಿ ಮಂಡಿಸಿತ್ತು.

**ನಿರ್ಣಯ :** ಸಭೆಯು ಶ್ರೀ ಸಿದ್ಧಯ್ಯ. ಎಸ್ ಇವರ ವೇತನ ಶ್ರೇಣಿಯ ವ್ಯತ್ಯಾಸವನ್ನು ದಾಖಲೆಗಳನ್ನು ಪರಿಶೀಲಿಸಿ ನಿಯಮಾನುಸಾರ ಸರಿಪಡಿಸಲು ಅನುಮೋದಿಸಿತು.

**ವಿಷಯ 14: ಶ್ರೀ ಮೇಧಾದಕ್ಷಿಣಮೂರ್ತಿ ವೇಧಭವನ ಸಂಸ್ಕೃತ ಕಾಲೇಜಿನಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ 2015–16ನೇ ಸಾಲಿಗೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಅನುಮತಿ ನೀಡಲು ಸಭೆಗೆ ಮಂಡಿಸಿದೆ.**

**ಟಿಪ್ಪಣಿ:** ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಮೇಧಾದಕ್ಷಿಣಮೂರ್ತಿ ವೇಧಭವನ ಸಂಸ್ಕೃತ ಕಾಲೇಜು ಗೋಕರ್ಣ, ಉತ್ತರ ಕನ್ನಡ ಜಿಲ್ಲೆ –ಈ ಸಂಸ್ಕೃತ ಕಾಲೇಜಿನಲ್ಲಿ ಒಟ್ಟು 21 ಹುದ್ದೆಗಳು ಮಂಜೂರಾಗಿದ್ದು, ಅವುಗಳಲ್ಲಿ ನಿವೃತ್ತಿ ಹಾಗೂ ಇನ್ನಿತರ ಕಾರಣಗಳಿಂದ 16 ಹುದ್ದೆಗಳು ಖಾಲಿ ಇವೆ. ಅವುಗಳಲ್ಲಿ 2015–16ನೇ ಸಾಲಿಗೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಅವಶ್ಯವಿರುವ ಹುದ್ದೆಗಳ ವಿವರವನ್ನು ಈ ಕೆಳಗಿನಂತೆ ನೀಡಲಾಗಿದ್ದು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಸಲ್ಲಿಸಲಾಗಿತ್ತು.

**ಅವಶ್ಯಕ ಸಿಬ್ಬಂದಿಗಳ ಒಟ್ಟು ವಿವರ**

| ಕ್ರ.ಸಂ | ಹುದ್ದೆ | ಸಂಖ್ಯೆ |
|---|---|---|
| | **ಪಾಠಶಾಲಾ ವಿಭಾಗ** | |
| 1 | ಅತಿಥಿ | 2 |
| | **ಕಾಲೇಜು ವಿಭಾಗ** | |
| 2 | ಅಲಂಕಾರ | 1 |
| 3 | ವ್ಯಾಕರಣ | 1 |
| 4 | ಅದ್ವೈತ ವೇದಾಂತ | 1 |
| 5 | ಕನ್ನಡ ಭಾಷೆ | 1 |
| 6 | ದ್ವಿತೀಯ ದರ್ಜೆ ಸಹಾಯಕರು | 1 |

**ನಿರ್ಣಯ: ಮೇಲ್ಕಂಡ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಅನುಮತಿ ನೀಡಿತು.**

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು:**

**ವಿಷಯ 1: ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು –ಈ ಕಾಲೇಜಿಗೆ ಶ್ರೀ ಜಿ.ಎನ್. ಪರವಾಸುದೇವನ್ ಅವರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅನುಮತಿ ನೀಡುವ ಬಗೆಗೆ.**

**ಟಿಪ್ಪಣಿ:** ಶ್ರೀ ಜಿ.ಎನ್. ಪರವಾಸುದೇವನ್ ಅವರು ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು –ಇದರ ಪ್ರಾಂಶುಪಾಲರ ಮೂಲಕ ಪತ್ರ ನೀಡಿದ್ದು, ದ್ವಿತೀಯ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸಲು ಅವಕಾಶವನ್ನು ಕೋರಿರುತ್ತಾರೆ. ಕರ್ನಾಟಕ ಸರ್ಕಾರದ ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆ ಪತ್ರ ಸಂಖ್ಯೆ (1) ಎಸಿಬಿ 3 ಸಿಆರ್ 5/10–11; ದಿನಾಂಕ: 05.10.2010; ಪತ್ರ ಸಂಖ್ಯೆ (2) ಕಂ.ಇ. 134 ಮುಸೇವಿ 2011; ದಿನಾಂಕ: 20.10.2011; ಪತ್ರ ಸಂಖ್ಯೆ (3) ಕಂ.ಇ. 126 ಮುಸೇವಿ 2012; ದಿನಾಂಕ: 04.01.2013; ಪತ್ರ ಸಂಖ್ಯೆ (4) ಕಂ.ಇ. 83 ಮುಸೇವಿ 2013; ದಿನಾಂಕ: 07.1.0.2013ರಂತೆ ಶ್ರೀ ಜಿ.ಎನ್. ಪರವಾಸುದೇವನ್ ಅವರು ಮಾನ್ಯ ಪ್ರಾಂಶುಪಾಲರ ಪತ್ರದಂತೆ ಸತತವಾಗಿ ನಾಲ್ಕು ವರ್ಷಗಳು ಹಿಂದೂ ಧಾರ್ಮಿಕ ಸಂಸ್ಥೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಗಣಕಯಂತ್ರ ಸಹಾಯಕರಾಗಿ ಕಾರ್ಯನಿರ್ವಹಿಸಿದ್ದಾರೆ. 12.08.2014ರಂದು ಅವರ ಹೊರಗುತ್ತಿಗೆ ಅವಧಿಯು ಪೂರ್ಣವಾಗಿರುತ್ತದೆ.

ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ದೈನಂದಿನ ಆಡಳಿತಾತ್ಮಕ ಕೆಲಸಗಳಿಗೆ ತುರ್ತು ಸಿಬ್ಬಂದಿ ಅಗತ್ಯವಿದೆ ಎಂದು ಪ್ರಾಂಶುಪಾಲರು ಪತ್ರಗಳು ಹಾಗೂ ಮೌಖಿಕವಾಗಿ ತಿಳಿಸಿದ್ದು, ಗ್ರೂಪ್ 'ಸಿ' ನೌಕರರಲ್ಲಿ 'ದ್ವಿತೀಯ ದರ್ಜೆ ಸಹಾಯಕ'ರ ಮೂರು ಹುದ್ದೆಗಳು ಬಹಳ ವರ್ಷಗಳಿಂದ ಖಾಲಿ ಇರುವುದರಿಂದ ಈ ಕೆಳಕಂಡ ಮೂವರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅನುಮತಿಯನ್ನು ಕೋರಿರುತ್ತಾರೆ. ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿತ್ತು.

1. ಶ್ರೀ ಮೋಹನ್‌ಕುಮಾರ್ ಬಿನ್ ಮಹಾದೇವ, ವಿದ್ಯಾರಣ್ಯಪುರಂ, ಮೈಸೂರು

2. ಶ್ರೀಮತಿ ಎನ್. ರೂಪ ಕೋ. ಪದ್ಮನಾಭ, ವರಕೋಡು ಗ್ರಾಮ, ಮೈಸೂರು ತಾಲ್ಲೂಕು
3. ಶ್ರೀ ಜಿ.ಎನ್. ಪರವಾಸುದೇವನ್, ಮೈಸೂರು

**ನಿರ್ಣಯ: ಈಗ ಮಾಡಿಕೊಂಡ ನೇಮಕವನ್ನು ಸಭೆಯು ತಿರಸ್ಕರಿಸಿತು. ಪ್ರಶಾಸನ ಸಭೆಯು ಯಾವುದೇ ನೇಮಕಾತಿ ಮಾಡಿಕೊಳ್ಳುವ ಮೊದಲು ನಿಯಮಾನುಸಾರ ಶ್ರೀ ಮನ್ಮಹಾರಾಜ ಸಂಸ್ಕೃತ ಕಾಲೇಜಿನಿಂದ ಖಾಲಿ ಇರುವ ಒಟ್ಟೂ ಹುದ್ದೆಗಳ (ಹಿರಿಯ ದರ್ಜೆ ಸಹಾಯಕರ/ಕಿರಿಯ ದರ್ಜೆ ಸಹಾಯಕರ) ವಿವರ, ಭವಿಷ್ಯದಲ್ಲಿ ಬೇಕಾಗುವ ಹುದ್ದೆಗಳು ಈ ಅಂಶಗಳನ್ನು ಪ್ರಾಚಾರ್ಯರಿಂದ ತಕ್ಷಣವೇ ತರಿಸಿಕೊಂಡು ಮಾನ್ಯ ಕುಲಪತಿಗಳು ಪ್ರ ಇವರಿಗೆ ಪ್ರಸ್ತಾವ ಸಲ್ಲಿಸಿ ಸ್ಥಳೀಯ ಪತ್ರಿಕೆಯಲ್ಲಿ ಜಾಹೀರಾತು ನೀಡಿ ನಂತರ ಹೊರಗುತ್ತಿಗೆ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಎಂದು ಸಭೆಯು ಸೂಚಿಸಿತು.**

**ವಿಷಯ 2: ಮಾನ್ಯ ಪ್ರಭಾರಿ ಕುಲಪತಿಗಳ ವಿರುದ್ಧ ಬಂದಿರುವ ದೂರಿನ ಬಗೆಗೆ.**

**ಟಿಪ್ಪಣಿ:** ಅಖಿಲ ಕರ್ನಾಟಕ ವಿಚಾರ ವೇದಿಕೆ (ರಿ.), ಬೆಂಗಳೂರು–ಇದರ ಅಧ್ಯಕ್ಷರಾದ ಶ್ರೀ ಶ್ರೀ ಶ್ರೀ ಡಾ. ಶಾಂತವೀರ ಮಹಾಸ್ವಾಮೀಜಿ ಅವರು ದಿನಾಂಕ: 23.02.2015ರಂದು ಪ್ರಭಾರಿ ಕುಲಪತಿಗಳು ಉತ್ತರ ಪ್ರದೇಶದ ಯಾವುದೋ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಕುಲಪತಿಗಳಾಗಿ ಹೋಗುವುದರ ವಿರುದ್ಧ ಕೆಲವು ದಾಖಲೆಗಳ ಸಹಿತ ದೂರನ್ನು ನೀಡಿದ್ದರು. ಕುಲಸಚಿವರು ಈ ವಿಷಯವನ್ನು ದಿನಾಂಕ: 28.01.2015ರ ಗೌಪ್ಯ ಕಡತದ ಮೂಲಕ ಪ್ರಭಾರಿ ಕುಲಪತಿಗಳ ಗಮನಕ್ಕೆ ತಂದು, ಈ ವಿಷಯದಲ್ಲಿ ಯಾವ ಕ್ರಮ ವಹಿಸಬೇಕೆಂದು ಕೇಳಿದ್ದರು. ಕುಲಪತಿಗಳು ಕಸಂವಿ ಅಧಿನಿಯಮದ ಪ್ರಕಾರ ಅಧ್ಯಾಯ 3/06ರ ಪ್ರಕಾರ ಕುಲಪತಿಗಳ ವಿರುದ್ಧ ದೂರುಗಳಿದ್ದಲ್ಲಿ ವಿಚಾರಣೆ ಮಾಡುವ ಅಧಿಕಾರ ಕೇವಲ ರಾಜ್ಯ ಸರ್ಕಾರ ಅಥವಾ ಕುಲಾಧಿಪತಿಗಳಿಗೆ ಇರುವುದರಿಂದ ಅರ್ಜಿದಾರರು ನೇರವಾಗಿ ಸರ್ಕಾರಕ್ಕೆ ದೂರನ್ನು ಸಲ್ಲಿಸಲು ಸೂಚಿಸಿದ್ದಾರೆ. ಈ ಮಧ್ಯೆ, ಕರ್ನಾಟಕದ ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಯವರು ಕುಲಸಚಿವರಿಗೆ ಪತ್ರ ಬರೆದು, ರಾಜ್ಯಪಾಲರಿಗೆ ದೂರನ್ನು ಹಸ್ತಾಂತರಿಸುವಂತೆ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಕುಲಸಚಿವರು ಇಬ್ಬರಿಗೂ ಸಹ ಪತ್ರವನ್ನು ಬರೆದಿದ್ದು, ಸಭೆಯ ಮುಂದೆ ಮಂಡಿಸಿತ್ತು.

**ನಿರ್ಣಯ: ಈ ವಿಷಯಕ್ಕೆ ಸಂಬಂಧಿಸಿದಂತೆ ಘನತೆವೆತ್ತ ರಾಜ್ಯಪಾಲರು ಹಾಗೂ ಕುಲಾಧಿಪತಿಗಳಿಂದ ಬಂದ ಸೂಚನೆಯಂತೆ ಕಡತವನ್ನು ವಿಸರ್ಜಿಸಲು ಸಭೆಯು ಸೂಚಿಸಿತು.**

**ವಿಷಯ 3: ಗ್ರಂಥಾಲಯಕ್ಕೆ ಪುಸ್ತಕಗಳನ್ನು ಖರೀದಿಸುವ ಕುರಿತು,**

**ಟಿಪ್ಪಣಿ:** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಸಪ್ನಾ ಬುಕ್ ಹೌಸ್‌ನಿಂದ 10% ರಿಯಾಯಿತಿ ದರದಲ್ಲಿ 409 ಪುಸ್ತಕಗಳನ್ನು ಈಗಾಗಲೇ ಖರೀದಿಸಲಾಗಿದ್ದು, ಅವುಗಳ ಒಟ್ಟು ಮೊತ್ತ 1,29,688/– ಗಳನ್ನು ಪಾವತಿಸಿದೆ. ಈ ಮೊತ್ತಕ್ಕೆ ಸಭೆಯ ಘಟನೋತ್ತರ ಅನುಮೋದನೆಯನ್ನು ಕೋರಿದೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ, ರಾಷ್ಟ್ರೀಯ ಸಂಸ್ಕೃತ ಸಂಸ್ಥಾನವು ಪ್ರಕಟಿಸಿರುವ ನೂತನ ಗ್ರಂಥಗಳನ್ನು ಗ್ರಂಥಾಲಯಕ್ಕೆ ಖರೀದಿಸಬೇಕಾಗಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿತ್ತು.

**ನಿರ್ಣಯ: ಗ್ರಂಥಾಲಯಕ್ಕೆ ಪುಸ್ತಕಗಳನ್ನು ಖರೀದಿಸಿದ್ದನ್ನು ಸಭೆಯು ಘಟನೋತ್ತರವಾಗಿ ಅನುಮೋದಿಸಿತು.**

**ವಿಷಯ 4: ಸ್ವರ್ಣಪದಕ ಪುರಸ್ಕಾರ ದತ್ತಿನಿಧಿ ಕುರಿತು.**

**ಟಿಪ್ಪಣಿ:** ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ, ಮುಂಡರಗಿ –ಇಲ್ಲಿನ ಶ್ರೀ ಜಗದ್ಗುರು ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 'ಮುಂಡರಗಿ ಶ್ರೀ ಜಗದ್ಗುರು ಅನ್ನದಾನೀಶ್ವರ ಸ್ವರ್ಣಪದಕ' ಪುರಸ್ಕಾರ ನೀಡಲು ರೂ. 40,000/–ಗಳನ್ನು ದತ್ತಿನಿಧಿ ನೀಡಿದ್ದರು. ಸ್ವರ್ಣಪದಕ ಪುರಸ್ಕಾರವನ್ನು ನೀಡಲು ಕನಿಷ್ಠ ರೂ. 1.00 ಲಕ್ಷಗಳನ್ನು ದತ್ತಿನಿಧಿ ಸ್ಥಾಪಿಸುವುದು ಅವಶ್ಯವೆಂದು ಪ್ರಶಾಸನ ಸಮಿತಿಯು ತೀರ್ಮಾನಿಸಿರುವುದರಿಂದ ಹಾಗೂ ಪೂಜ್ಯರು ನೀಡಿರುವ ದತ್ತಿನಿಧಿ ಮೊತ್ತಕ್ಕೆ ಸ್ವೀಕೃತವಾಗುವ ಬಡ್ಡಿ ಹಣದಿಂದ, ಪ್ರಸ್ತುತ ಮಾರುಕಟ್ಟೆ ದರಗಳನ್ವಯ ಸ್ವರ್ಣಪದಕವನ್ನು ನೀಡಲು ಸಾಧ್ಯವಿಲ್ಲದ ಕಾರಣದಿಂದಾಗಿ ದತ್ತಿನಿಧಿ ಮೊತ್ತವನ್ನು ಹೆಚ್ಚಿಸಲು ಪೂಜ್ಯರನ್ನು ಕೋರಲಾಗಿತ್ತು. ಆದರೆ, ಶ್ರೀಮಠದ ಕಾರ್ಯದರ್ಶಿಗಳು ದಿನಾಂಕ: 14.02.2015ರಂದು ಪತ್ರವನ್ನು ಬರೆದು, ತಾವು ಈಗಾಗಲೇ ನೀಡಿರುವ ಮೊತ್ತದಲ್ಲಿಯೇ ಪುರಸ್ಕಾರವನ್ನು ನೀಡುವಂತೆ ಹಾಗೂ ದತ್ತಿನಿಧಿ ಮೊತ್ತವನ್ನು ಹೆಚ್ಚಿಸಲು ನಿರಾಕರಿಸಿರುತ್ತಾರೆ. ಮುಂದಿನ ಕ್ರಮವಹಿಸಲು ಸಭೆಯ ಅನುಮತಿಗಾಗಿ ವಿಷಯವನ್ನು ಮಂಡಿಸಿತ್ತು.

**ನಿರ್ಣಯ: ಈ ವಿಷಯದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಸಭೆಯು ಸೂಚಿಸಿತು. ಆದರೆ ಈ ಪ್ರಕರಣದಂತೆ 50.000 ದತ್ತಿ ನಿಧಿಯನ್ನು ಪಡೆದು ಪದವಿ ಹಂತದಲ್ಲಿ ರಜತ ಪದಕವನ್ನು ಅಥವಾ ನಗದು ಬಹುಮನವನ್ನು ವಿದ್ಯಾರ್ಥಿಗಳಿಗೆ ನೀಡಬಹುದೆಂದು ಸಭೆಯು ಸೂಚಿಸಿತು.**

**ವಿಷಯ 5: ಪಿ.ಎಚ್.ಡಿ ವ್ಯಾಸಂಗಕ್ಕಾಗಿ ವೇತನ ಸಹಿತ ರಜೆ ಮಂಜೂರು ಮಾಡುವ ಬಗ್ಗೆ.**

**ಟಿಪ್ಪಣಿ:** ಎಸ್.ಎಮ್.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ –ಇಲ್ಲಿನ ಅಲಂಕಾರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಅಮೃತೇಶ ಡಿ.ಎಸ್. ಇವರು ತುಮಕೂರು ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಪದವಿಗಾಗಿ ಪ್ರೊ. ಮಹಾಬಲೇಶ್ವರ ಪಿ. ಭಟ್ಟ ಇವರ ಮಾರ್ಗದರ್ಶನದಲ್ಲಿ "ಸಾದೃಶ್ಯಮೂಲಾನಾಂ ಅಲಂಕಾರಾಣಾಂ ವಿಮರ್ಶಾತ್ಮಕಮಧ್ಯಯಂ" ಎಂಬ ವಿಷಯದಲ್ಲಿ ಸಂಶೋಧನೆ ಮಾಡುತ್ತಿದ್ದು, ಇದಕ್ಕೆ ಸಹಾಯಕವಾಗುವಂತೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ದಿನಾಂಕ: 01.03.2015 ರಿಂದ 31.03.2016 ರವರೆಗೆ ವೇತನಸಹಿತ ರಜೆ ಮಂಜೂರು ಮಾಡಲು ಕೋರಿರುತ್ತಾರೆ. ಮುಂದಿನ ಕ್ರಮವಹಿಸಲು ಸಭೆಯ ಅನುಮತಿಗಾಗಿ ವಿಷಯವನ್ನು ಮಂಡಿಸಿತ್ತು.

**ನಿರ್ಣಯ: ಈ ವಿಷಯದಲ್ಲಿ ಕಾನೂನಿನ ತೊಡಕಿರುವ ಕಾರಣ ಕಾನೂನು ತಜ್ಞರ ಸಲಹೆ ಪಡೆದು ಯುಜಿಸಿ ನಿಯಮಾವಳಿಯಂತೆ ಕ್ರಮ ತೆಗೆದುಕೊಳ್ಳಲು ಸಭೆಯು ಸೂಚಿಸಿತು.**

**ವಿಷಯ 6: ಬ್ಯಾಕ್ ಲಾಗ್ ಹುದ್ದೆ ತುಂಬುವ ಬಗೆಗೆ,**

**ಟಿಪ್ಪಣಿ:** 10 ಪಾಠಶಾಲೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಯನ್ನು ಪ್ರಶಾಸನ ಸಮಿತಿ ಸಭೆಯ ನಿರ್ಣಯದಂತೆ ಭರ್ತಿಮಾಡಿ ಸಂಬಂಧಿಸಿದ ಶಿಕ್ಷಕರಿಗೆ ನೇಮಕಾತಿ ಆದೇಶ ನೀಡಲಾಗಿದೆ. ಬಾಕಿ ಇರುವ 31 ಬ್ಯಾಕ್ ಲಾಗ್ ಹುದ್ದೆಯನ್ನು ನಮ್ಮ ಹಂತದಲ್ಲೇ ತುಂಬಲು ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಸಲ್ಲಿಸಿತ್ತು.

**ನಿರ್ಣಯ: ಬ್ಯಾಕ್ ಲಾಗ್ ಹುದ್ದೆಗಳಿಗೆ ಸಂಬಂಧಿಸಿದಂತೆ ಒಂದು ಉಪಸಮಿತಿಯನ್ನು ಈ ಕೆಳಕಂಡಂತೆ ರಚಿಸಲಾಯಿತು.**

**ಅಧ್ಯಕ್ಷರು: ಶ್ರೀ ಕೆ ಭೀಮಪ್ಪ, ಚಿತ್ರದುರ್ಗ**

**ಸದಸ್ಯರು: ವಿದ್ವಾನ್ ಜಿ ಎಲ್ ಭಟ್ ಉಮ್ಮಚಗಿ**

**ಸದಸ್ಯ ಕಾರ್ಯದರ್ಶಿ: ಡಾ|| ವಿ.ಗಿರೀಶ್ ಚಂದ್ರ, ನಿರ್ದೇಶಕರು, ಸಂ.ಶಿ.ನಿ.**

**ಈ ಸಮಿತಿಯ ವರದಿಯ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಲು ಒಪ್ಪಿಗೆ ನೀಡಲಾಯಿತು.**

**ವಿಷಯ7: ರಾಜ್ಯದ ಸಂಸ್ಕೃತ ಪಾಠಶಾಲೆಗಳಲ್ಲಿ ವಲಯಮಟ್ಟದ ಮತ್ತು ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸಿದ್ದು, ಖರ್ಚು–ವೆಚ್ಚಗಳನ್ನು ಅನುಮೋದಿಸಲು.**

**ಟಿಪ್ಪಣಿ:** ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ರಾಜ್ಯದ ಸಂಸ್ಕೃತ ಪಾಠಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳ ವಿದ್ಯಾರ್ಥಿಗಳಿಗೆ ಈಗಾಗಲೇ ವಲಯಮಟ್ಟದ ಸ್ಪರ್ಧೆಗಳನ್ನು ಯಶಸ್ವಿಯಾಗಿ ನಡೆಸಿದೆ. ಇದೀಗ, ವಲಯಮಟ್ಟದ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ವಿವಿಧ ಸ್ಪರ್ಧೆಗಳನ್ನು ದಿನಾಂಕ: 08.12.2014 ರಂದು ಯಶಸ್ವಿಯಾಗಿ ನಡೆಸಲಾಗಿದೆ. ಈ ಸ್ಪರ್ಧಾ ಕಾರ್ಯಕ್ರಮಕ್ಕೆ ಅಂದಾಜು 4,66,000=00 ರೂಗಳು ಖರ್ಚಾಗಿದ್ದು ಪ್ರಶಾಸನ ಸಮಿತಿ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿತ್ತು.

**ನಿರ್ಣಯ: ಪ್ರಶಾಸನ ಸಮಿತಿ ಸಭೆಯ ಘಟನೋತ್ತರ ಅನುಮೋದನೆ ನೀಡಿತು.**

**ವಿಷಯ 8: ಮಹದೇಶ್ವರ ಸಂಸ್ಕೃತ ಪಾಠಶಾಲೆ ಹೊಸಪಾಳ್ಯ,ಕೊಳ್ಳೇಗಾಲ ಈ ಪಾಠಶಾಲೆಯ ಮಾನ್ಯತೆ ನವೀಕರಿಸುವ ಬಗೆಗೆ.**

**ಟಿಪ್ಪಣಿ:** ಮಹದೇಶ್ವರ ಸಂಸ್ಕೃತ ಪಾಠಶಾಲೆ ಹೊಸಪಾಳ್ಯ,ಕೊಳ್ಳೇಗಾಲ,ಈ ಪಾಠಶಾಲೆಯು ಅನುದಾನ ಸಹಿತವಾಗಿದ್ದು, 2013–14 ರವರೆಗೆ ಮಾನ್ಯತೆ ಇದ್ದು, ಈಗ 2014–15 ರಿಂದ 2018–19 ರವರೆಗೆ ಮಾನ್ಯತೆ ನವೀಕರಿಸಿದ್ದು, ಘಟನೋತ್ತರ ಅನುಮತಿ ನಿರೀಕ್ಷಿಸಿ ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ: ಪ್ರಶಾಸನ ಸಮಿತಿ ಸಭೆಯ ಘಟನೋತ್ತರ ಅನುಮೋದನೆ ನೀಡಿತು.**

**ವಿಷಯ 9: ಶ್ರೀ ವಾಗ್ವರ್ಧಿನೀ ಸಂಸ್ಕೃತ ಪಾಠಶಾಲೆ, ಶ್ರೀರಾಮಮಂದಿರ, ಕೋಟೆ, ಅರಕಲಗೂಡು, ಹಾಸನ –ಈ ಪಾಠಶಾಲೆಯ ಮಾನ್ಯತೆ ನವೀಕರಿಸುವ ಬಗೆಗೆ.**

**ಟಿಪ್ಪಣಿ:** ಶ್ರೀ ವಾಗ್ವರ್ಧಿನೀ ಸಂಸ್ಕೃತ ಪಾಠಶಾಲೆ, ಶ್ರೀರಾಮಮಂದಿರ, ಕೋಟೆ, ಅರಕಲಗೂಡು, ಹಾಸನ –ಈ ಪಾಠಶಾಲೆಯು ಅನುದಾನಸಹಿತವಾಗಿದ್ದು, 2007–08 ರವರೆಗೆ ಮಾನ್ಯತೆ ಇದ್ದು, ಕಾರಣಾಂತರಗಳಿಂದ ಸರ್ಕಾರ

ಮಾನ್ಯತೆಯನ್ನು ನೀಡಿರಲಿಲ್ಲ. ಪ್ರಸ್ತುತ 01.12.2008 ರಿಂದ ಜಾರಿಗೆ ಬರುವಂತೆ ಸರ್ಕಾರವು ಈಗ ಮಾನ್ಯತೆಯನ್ನು ಮುಂದುವರಿಸಲು ಆದೇಶಿಸಿದೆ. 2008 ರಿಂದ 2014–15 ರವರೆಗೆ ಮಾನ್ಯತೆ ನವೀಕರಿಸಿದ್ದು, ಘಟನೋತ್ತರ ಮಾನ್ಯತೆಯನ್ನು ನೀರೀಕ್ಷಿಸಿ ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿತ್ತು.

**ನಿರ್ಣಯ:** **ಪ್ರಶಾಸನ ಸಮಿತಿ ಸಭೆಯ ಘಟನೋತ್ತರ ಅನುಮೋದನೆ ನೀಡಿತು.**

**ವಿಷಯ10: ಶ್ರೀ ಎಮ್.ಆರ್. ಗೋಪಾಲಕೃಷ್ಣ, ಪತ್ರಾಂಕಿತ ವ್ಯವಸ್ಥಾಪಕರು –ಇವರು ಸಂಸ್ಕೃತ ನಿರ್ದೇಶನಾಲಯಕ್ಕೆ ನಿಯೋಜನೆಯ ಮೇರೆಗೆ ಹಾಜರಾಗಿರುವ ಬಗೆಗೆ.**

**ಟಿಪ್ಪಣಿ:** ಶ್ರೀ ಎಮ್.ಆರ್. ಗೋಪಾಲಕೃಷ್ಣ, ಪತ್ರಾಂಕಿತ ವ್ಯವಸ್ಥಾಪಕರು –ಇವರು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ ಡಿಪಿಐ: 2015 ದಿನಾಂಕ 22.01.2015 ಮತ್ತು ಇಡಿ 20 ಯುಎನ್ಇ 2015 ದಿನಾಂಕ: 10.02.2015 ರಂತೆ ಕೆಸಿಎಸ್ಆರ್ ನಿಯಮ 425 ಹಾಗೂ ಸರ್ಕಾರಿ ಆದೇಶ ಸಂಖ್ಯೆ ಎಫ್.ಡಿ 19 ಎಸ್.ಆರ್.ಎಸ್ 1988 ದಿನಾಂಕ: 25.05.88ರ ಅನುಬಂಧದಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ ದಿನಾಂಕ: 12.02.2015ರ ಪೂರ್ವಾಹ್ನ ಕರ್ತವ್ಯದ ಮೇಲೆ ಹಾಜರಾಗಿದ್ದಾರೆ. ಸದರಿಯವರ ಸೇವೆಯನ್ನು ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಪಡೆಯುವ ಸಂಬಂಧ ಘಟನೋತ್ತರ ಅನುಮತಿಗಾಗಿ ಪ್ರಶಾಸನ ಸಮಿತಿಗೆ ಮಂಡಿಸಿತ್ತು.

**ನಿರ್ಣಯ: ಶ್ರೀ ಎಮ್.ಆರ್. ಗೋಪಾಲಕೃಷ್ಣ, ಪತ್ರಾಂಕಿತ ವ್ಯವಸ್ಥಾಪಕರು –ಇವರು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ ನಿಯೋಜನೆಯನ್ನು ಸಭೆಯು ಅನುಮೋದಿಸಿತು.**

**ವಿಷಯ 11: 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಯೋಜನಾ ಮತ್ತು ಅಭಿವೃದ್ಧಿ ಪರಿಷತ್ತು'ಅನ್ನು ರಚಿಸಿರುವುದರ ಬಗೆಗೆ.**

**ಟಿಪ್ಪಣಿ:** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಇತರೆ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವ ಸಲುವಾಗಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯನ್ನು 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಯೋಜನಾ ಮತ್ತು ಅಭಿವೃದ್ಧಿ ಪರಿಷತ್ತು'ಅನ್ನು ರಚಿಸಲಾಗಿದೆ. ವಿಶ್ವವಿದ್ಯಾಲಯದ ಸಂಶೋಧನಾ ಯೋಜನೆಗಳು, ಭವನ ನಿರ್ಮಾಣ ಯೋಜನೆಗಳು, ಶೈಕ್ಷಣಿಕ ಯೋಜನೆಗಳು ಹಾಗೂ ಇತ್ಯಾದಿ ಯೋಜನೆಗಳನ್ನು ರೂಪಿಸುವುದು ಮತ್ತು ಅವುಗಳನ್ನು ಅನುಷ್ಠಾನಕ್ಕೆ ತರುವುದು ಈ ಪರಿಷತ್ತಿನ ಮುಖ್ಯ ಕಾರ್ಯವಾಗಿದೆ. ಈ ಬಗೆಗೆ ಕಾಲಕಾಲಕ್ಕೆ ವಿಶ್ವವಿದ್ಯಾಲಯಕ್ಕೆ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಈ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕರು ಯುಜಿಸಿ ಮತ್ತು ಇತರೆ ಸರ್ಕಾರಿ ಸಂಸ್ಥೆಗಳ ಜೊತೆಗೆ ವ್ಯವಹರಿಸುವ ಅಧಿಕಾರ ಹೊಂದಿರುತ್ತಾರೆ ಮತ್ತು ಕುಲಸಚಿವರ ಸಹಕಾರದೊಂದಿಗೆ ವಿಶ್ವವಿದ್ಯಾಲಯದ ಇತರೆ ವ್ಯವಸ್ಥೆಯೊಂದಿಗೆ ಯೋಜನೆ ಅನುಷ್ಠಾನಕ್ಕೆ ಕ್ರಮವಹಿಸಲಿದ್ದಾರೆ. ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಗಾಗಿ ವಿಷಯವನ್ನು ಮಂಡಿಸಿತ್ತು.

**ನಿರ್ಣಯ:** **ಕರ್ನಾಟಕದ ಬೇರೆ ವಿಶ್ವವಿದ್ಯಾಲಯಗಳ ಮಾದರಿಯಲ್ಲಿ ಈ ಪರಿಷತ್ತನ್ನು ಸ್ಥಾಪಿಸಲು ಸಭೆಯು ಅನುಮೋದಿಸಿತು.**

**ವಿಷಯ 12: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ ಸಹಾಯಕ ನಿರ್ದೇಶಕರನ್ನು ನಿಯೋಜಿಸುವ ಬಗೆಗೆ,**

**ಟಿಪ್ಪಣಿ:** ನಿರ್ದೇಶನಾಲಯದಲ್ಲಿ ಕೆಲಸ ಕಾರ್ಯಗಳು ಜಾಸ್ತಿ ಇರುವುದರಿಂದ ಕಾಲಕಾಲಕ್ಕೆ ಎಲ್ಲ ಕೆಲಸಗಳನ್ನು ಸುಗಮವಾಗಿ ನಡೆಸಲು ಒಬ್ಬ ಸಹಾಯಕ ನಿರ್ದೇಶಕರ ಅವಶ್ಯಕತೆ ಇದೆ. ಆದ್ದರಿಂದ ಶ್ರೀ ಚಾಮರಾಜೇಂದ್ರ ಕಾಲೇಜಿನ ಪ್ರಾಧ್ಯಾಪಕರಾದ ವಿದ್ವಾನ್ ಎಸ್ ದಯಾಶಂಕರ್ ಇವರನ್ನು ನಿಯೋಜನೆ ಮೇರೆಗೆ ನಿರ್ದೇಶನಾಲಯದ ಸಹಾಯಕ ನಿರ್ದೇಶಕರಾಗಿ ನಿಯೋಜನೆ ಮಾಡಿಕೊಳ್ಳಲಾಗಿದ್ದು ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಗಾಗಿ ವಿಷಯವನ್ನು ಮಂಡಿಸಿತ್ತು.

**ನಿರ್ಣಯ: ವಿದ್ವಾನ್ ಎಸ್. ದಯಾಶಂಕರ್ ಅವರ ಸಹಾಯಕ ನಿರ್ದೇಶಕರನ್ನಾಗಿ ಮಾಡಿದ ನಿಯೋಜನೆಯನ್ನು ಸಭೆಯು ಅನುಮೋದಿಸಿತು.**

**ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು**

**ಸದಸ್ಯ ಕಾರ್ಯದರ್ಶಿ/ಕುಲಸಚಿವರು** **ಅಧ್ಯಕ್ಷರು/ ಕುಲಪತಿಗಳು(ಪ್ರ)**